**<u>ಸಾಕ್ಷಿಯನ್ನು ದಿನಾಂಕಃ 07-03-2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ಪ್ರತಿವಾದಿ ಪರ ವಕೀಲರವರಿಂದಃ</u>**

1. ನಾನು 10 ನೇ ತರಗತಿಯ ವರೆಗೆ ಓದಿದ್ದೇನೆ. ಈ ದಾವೆಯನ್ನು ಸಿದ್ದಮ್ಮಳು ಹಂಪಮ್ಮನ ವಿರುದ್ಧ ಹೊಲದ ಸಂಬಂದ ಹಾಕಿರುವರು. ಇದು ಮೂಲತಃ ಯಾರ ಹೆಸರಿನಲ್ಲಿತ್ತು ಎಂದು ತಿಳಿದುಕೊಳ್ಳಲು ಹಿಂದಿನ ಪಹಣಿಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ನಾನು 2015 ನೇ ಸಾಲಿನ ಪಹಣಿಯನ್ನು ನೋಡಿದ್ದೇನೆ. ಆಗ ಪಹಣಿ ಗುಳ್ಳಮ್ಮ ಸಿದ್ದಮ್ಮ ಇವರ ಹೆಸರಿನಲ್ಲಿತ್ತು. ನಿಪಿ 1 ದಾಖಲೆಯನ್ನು ಹಂಪಮ್ಮ ಹೆಸರು ಕಂಡು ಬರುತ್ತಿದೆ ಅಂದರೆ ಸರಿ. ಹಂಪಮ್ಮ ಅಂದರೆ ಈ ಕೇಸಿನ ಪ್ರತಿವಾದಿ ಅಂದರೆ ಸರಿ. ಗ್ರಾಮದಲ್ಲಿ ಭೂಮಿ ವ್ಯವಹಾರ ನಡೆದರೆ ಗ್ರಾಮದಲ್ಲಿ ಎಲ್ಲರಿಗೂ ಸಾಮಾನ್ಯವಾಗಿ ಗೊತ್ತಾಗುತ್ತದೆ ಅಂದರೆ ಈಗ ಗೊತ್ತಾಗುತ್ತದೆ.

2. ಗೋಳಿಹಳ್ಳಿ ಸಿದ್ದಮ್ಮನ ಗಂಡನ ಹೆಸರು ಶಂಕ್ರಪ್ಪ. ವಾದಿಗಳ ಕುಟುಂಬದ ಮೂಲ ಪುರಷ ಕೋಡಿ ಹಳ್ಳಿ ಬರಮಪ್ಪ ಅಂದರೆ ನನಗೆ ಗೊತ್ತಿಲ್ಲ. ನನಗೆ ಆತನ ಪತ್ನಿಯ ಹೆಸರು ಗೊತ್ತಿಲ್ಲ. ಆತನ ಹೆಂಡತಿಯ ಹೆಸರು ಗಂಗಮ್ಮ ಅಂದರೆ ನನಗೆ ಗೊತ್ತಿಲ್ಲ. ಸಿದ್ದಮ್ಮನ ಗಂಡನ ಹೆಸರು ಶಂಕ್ರಪ್ಪ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆಕೆಯ ಗಂಡನ ಹೆಸರು ಸಿದ್ದಪ್ಪ ಅಂದರೆ ನನಗೆ ಸರಿಯಾಗಿ ಗೊತ್ತಿಲ್ಲ. ಸಿದ್ದಪ್ಪ ಹಾಗೂ ಸಿದ್ದಮ್ಮನಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ನಿಪಿ 6 ರಲ್ಲಿ ವ್ಯವಸಾಯಗಾರ ಕಲಂನಲ್ಲಿ ಪ್ರತಿವಾದಿಯ

ಗಂಡನ ಹೆಸರು ನಮೂದು ಇರುವುದು ಅಂದರೆ ನನಗೆ ಗೊತ್ತಿಲ್ಲ. ಹಂಪಮ್ಮನ ಗಂಡ ಬುಳ್ಳಪ್ಪ ಖರೀದಿ ಮಾಡಿದಾಗಿನಿಂದ ಆತನೇ ಸಾಗುವಳಿ ಮಾಡುತ್ತಿದ್ದ ಅಂದರೆ ನನಗೆ ಗೊತ್ತಿಲ್ಲ. ಈಗ ದಾವಾ ಅಸ್ತಿಯನ್ನು ಪ್ರತಿವಾದಿ ಹಾಗೂ ಆಕೆಯ ಮಕ್ಕಳು ಸಾಗುವಳಿ ಮಾಡುತ್ತಿರುವವರು ಅಂದರೆ ಸರಿಯಲ್ಲ.

3. ದಾವಾ ಅಸ್ತಿಯ ಪೂರ್ವಕ್ಕೆ ಸಿದ್ದಮ್ಮನ ಜಮೀನು, ಪಶ್ಚಿಮಕ್ಕೆ ರುದ್ರಯ್ಯನ ಜಮೀನು, ಉತ್ತರಕ್ಕೆ ಬಸಪ್ಪನ ಜಮೀನು ಹಾಗೂ ದಕ್ಷಿಣಕ್ಕೆ ಹಾವಿನ ರೇವಕ್ಕನ ಜಮೀನು ಇರುವುದು.

4. ದಾವಾ ಅಸ್ತಿಗೆ ಓಡಾಡುವ ದಾರಿಯಲ್ಲಿ ನಮ್ಮ ಹೊಲಕ್ಕೆ ಹೋಗುವ ದಾರಿ ಇದೆ ಎಂದು ತೋರಿಸಲು ಯಾವುದೇ ಇರುವುದಿಲ್ಲ ಅಂದರೆ ನನಗೆ ಗೊತ್ತಿಲ್ಲ. ವಾದಿ ನನ್ನ ಸಂಬಂಧಿಕರು ಅಂದರೆ ಸರಿಯಲ್ಲ. ಅವರು ನಮ್ಮ ಕುಲಸ್ಥರು ಅಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

07-03-2026

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 07.03.2026